ದಕ್ಷಿಣ ಕನ್ನಡದ ಭಾಷೆಯಲ್ಲಿ ಹೇಳುವದಾದರೆ ಪಟ್ಟಾ ಜಮೀನಿನ ಪಕ್ಕದ ಖರಾಬ್ ಜಮೀನು ಕುಮಕೀ ಎಂದು ಕರೆಯಲ್ಪಡುವದು. ಅಲ್ಲಿ ಹಸು ಮೇಯಿಸುವ ಉರುವಲು ಸಂಗ್ರಹಿಸುವ ಗೊಬ್ಬರ ಮಾಡುವ ಇತ್ಯಾದಿ ಸವಲತ್ತುಗಳು ಪಕ್ಕದ ಪಟ್ಟಾ ಜಮೀನಿನ ಒಡೆಯರಿಗೆ ಹೋಗುವದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಸಭಾಧ್ಯಕ್ಷರೆ, ಈ ಉತ್ತರದಿಂದ ಅವರಿಗೆ ಈ ತೃಪ್ತಿ ಆಗಿದ್ದರೆ ಇದನ್ನು ಸದನದಲ್ಲಿ ಓದುವಂಥ ಅಗತ್ಯವೇನೂ ಇಲ್ಲವೆಂದು ಭಾವಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾನು ಏನು ಹೇಳುತ್ತಿರುವುದೆಂದರೆ ನನಗೆ ತೃಪ್ತಿ ಆಗತಕ್ಕಂಥ ಪ್ರಶ್ನೆ ಅಲ್ಲ. ಅವರು ಮಾಡಿದ ಪಾಪವನ್ನು ನೀವು ಓದಿ ಹಾಳುಮಾಡಿಕೊಳ್ಳಬೇಡಿ. ಅವರ ಪಾಪ ಅವರೇ ಓದಲಿ. ನಿಮ್ಮ ಬಾಯಿಗೆ ಹಾಕತಕ್ಕಂಥ ಪ್ರಯತ್ನ ಅವರು ಮಾಡುತ್ತಾ ಇದ್ದಾರೆ. ಅದನ್ನು ಹೊರಿಸಿ ಕೊಳ್ಳಬೇಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸರ್ಕಾರ ಎಲ್ಲಾ ಒಂದೇ ಅಲ್ಲವೇ. ಯಾರು ಓದಿದರೆ ಏನು?

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಯಾರೋ ಕೊಟ್ಟಂತಹ ರಿಪೋರ್ಟ್‌ನ್ನು ತಾವು ಓದಿ ಹೇಳುವುದಾದರೆ ಅದರ ಕೂಲಂಕುಶ ವಿವರಣೆ ನೀಡಬೇಕು. ಏಕೆಂದರೆ ನಾವು ಕೊಟ್ಟಂತಹ ದೂರಿನ ಮೇಲೆ ಕೊಟ್ಟಂತಹ ವರದಿಯನ್ನು ತಾವು ವಿಮರ್ಶೆ ಮಾಡಿ ಉತ್ತರ ಕೊಟ್ಟರೆ ಒಳ್ಳೆಯದು. ನಾವು ಅದನ್ನು ಒಪ್ಪುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಸಭಾಧ್ಯಕ್ಷರೆ, ಸರ್ಕಾರ ನಡೆಯುವಂಥ ಕ್ರಮಗಳೇ ಈ ರೀತಿ ಇರುತ್ತದೆ. ಅಲ್ಲಿಂದ ಅಧಿಕಾರಿಗಳು ಕಳುಹಿಸಿಕೊಟ್ಟಂಥ ಉತ್ತರವನ್ನು ಸ್ವಲ್ಪಮಟ್ಟಿಗೆ ವಿಶ್ಲೇಷಿಸಿ ಮೇಲಧಿಕಾರಿಗಳು ಕೂಡ ಇದ್ದರೂ ಕೂಡ ನಾನು ಮಾನ್ಯ ನನ್ನ ಸಹದ್ಯೋಗಿಗಳ ಜೊತೆ ಹೇಳಿ ತಮ್ಮೊಂದಿಗೆ ಮಾತನಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಮಲಪ್ರಭಾ ಬಲದಂಡೆ ಕಾಲುವೆಯ 2ನೇ ಹಂಚಿಕೆಯ ಕೆಳಗೆ ಬರುವ ಗ್ರಾಮಗಳಿಗೆ ಸಮರ್ಪಕವಾಗಿ ನೀರು ಬಿಡುಗಡೆ.

ಶ್ರೀ ಜಗದೀಶ್ ಶೆಟ್ಟರು (ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರ) : ಮಾನ್ಯ ಉಪಸಭಾಧ್ಯಕ್ಷರೆ, ಮಲಪ್ರಭಾ ಬಲದಂಡೆ ಕಾಲುವೆಯ 2ನೇ ಹಂಚಿಕೆಯ ಕೆಳಗೆ ಬರುವ ನವಲಗುಂದ ತಾಲ್ಲೂಕಿನ ಗುಮಗೋಳ, ಬ್ಯಾಲಾಳ, ದನಸಿ, ಜಾವೂರ ಹಾಗೂ ಹಲ್ಲಾಳ ರೈತರು ಮುಖ್ಯ ಹಂಚಿಕೆಯಿಂದ ಸಮರ್ಪಕವಾದ ನೀರು ಹರಿಯದೇ ಇರುವ ಕಾರಣವಾಗಿ ಮೇಲ್ಕಾಣಿಸಿದ ಗ್ರಾಮದ ಜಾಮೀನುಗಳಿಗೆ ನೀರು ಪೂರೈಕೆಯಲ್ಲಿ ವ್ಯತ್ಯವಾಗಿ ಬೆಳೆ ಒಣಗುತ್ತಿರುವುದು ಮತ್ತು ಸಮರ್ಪಕ ನೀರು ಪೂರೈಕೆಯಾಗಿ ಅಲ್ಲಿನ ರೈತರು ಧರಣಿ ಸತ್ಯಾಗ್ರಹ ಮಾಡುತ್ತಿದ್ದು ಕಾರಣ ಸರ್ಕಾರ ಕೂಡಲೇ ಈ ಸಮಸ್ಯೆಯತ್ತ ಗಮನಹರಿಸಿ ಈ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಬೇಕೆಂದು ನಾನು ಈ ಮೂಲಕ ನೀರಾವರಿ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಬೃಹತ್ ನೀರಾವರಿ ರಾಜ್ಯ ಸಚಿವರು) : ಮಾನ್ಯ ಮುಖ್ಯಮಂತ್ರಿಗಳ ಪರಿಣಾಮ) : ಮಾನ್ಯ ಅಧ್ಯಕ್ಷರೆ, ಮಲಪ್ರಭಾ ಬಲದಂಡೆ ಕಾಲುವೆಯು 2ನೇ ಹಂಚು ಕಾಲುವೆಯು ಅಳತೆ ಕಿ.ಮಿ. 14.985 ರಿಂದ ಹೊರಡುತ್ತದೆ. ಇದರ ಉದ್ದ 12.800 ಕಿ.ಮಿ.ಗಳು, ಇದರಿಂದ ನೀರಾವರಿ ಗುತ್ತಿಗೆಗೆ ಇರುವ ಕ್ಷೇತ್ರ 2991 ಹೆಕ್ಟೇರುಗಳು, ಇದರ ನೀರಿನ ಸಾಮರ್ಥ್ಯ 47.98 ಕ್ಯೂಸೆಕ್ಸ್‌ಗಳು. ಇದರಲ್ಲಿ 24 ಉಪ ಹಂಚು ಕ್ಷೇತ್ರಗಳು ಇರುತ್ತವೆ. ನೀರಾವರಿ ಆಗುತ್ತಿರುವ ಕ್ಷೇತ್ರಕ್ಕೆ ಬೆಳೆ ನಮೂನೆ ಮೇರೆಗೆ ಶೇಕಡ 60 ಬಿತ್ತನೆಗೆ 47.98 ಕ್ಯೂಸೆಕ್ಸ ಸಾಕಾಗುತ್ತದೆ. ಆದರೆ ಶೇಕಡಾ 100 ರಂತೆ ಬಿತ್ತುವುದರಿಂದ ಬೇಕಾಗುವ ನೀರಿನ ಸಾಮರ್ಥ್ಯ 74.06 ಕ್ಯೂಸೆಕ್ಸ.

ಈ ಹಂಚು ಕ್ಷೇತ್ರದ ನೀರಾವರಿ ಸುಮಾರು 20 ವರ್ಷಗಳಿಂದ ನಡೆದಿದೆ. ಇದು ಎರೆ ಮಣ್ಣಿನ ಕ್ಷೇತ್ರದಲ್ಲಿ ಹೋಗುತ್ತದೆ. ಬೆಳೆ ನಮೂನೆ 40 ಮುಂ: 40 ರಬಿ: 20 ದ್ವಿಋತು ಗಮನಿಸಿ ಮುಂಗಾರು ಮತ್ತು ದ್ವಿಋತುವನ್ನು ಲೆಕಕ್ಕೆ ತೆಗೆದುಕೊಂಡು 60 ಶೇಕಡಾ ಪ್ರಮಾಣಕ್ಕೆ ವಿನ್ಯಾಸ ಮಾಡಲಾಗಿದೆ. ಅಂದರೆ 60 ಶೇಕಡಾ 1794.00 ಹೆಕ್ಟೇರು ಕ್ಷೇತ್ರವನ್ನು ಮುಂಗಾರಿನಲ್ಲೂ 40 ಶೇಕಡಾ ಮತ್ತು ದ್ವಿಋತು ಕೊಡಿ 60 ಶೇಕಡಾ 1794.00 ಹೆಕ್ಟೇರನ್ನು ಮಾತ್ರ ಸಾಗುವಳಿಮಾಡಬೇಕು. ಆದರೆ ರೈತರು ಪ್ರಾರಂಭದಿಂದಲೂ ಈ ಬೆಳೆ ನಮೂನೆಯನ್ನು ಪಾಲಿಸುತ್ತಿಲ್ಲ. ಶೇಕಡಾ 100 ಕ್ಷೇತ್ರವನ್ನು ಮುಂಗಾರು ಋತುವಿನಲ್ಲೂ, ಶೇಕಡಾ 100 ಹಿಂಗಾರು ಋತುವಿನಲ್ಲೂ ಸಾಗು ಮಾಡುತ್ತಾ ಬಂದಿದ್ದಾರೆ. ಅಂದರೆ ಕಾಲುವೆ 40 ಶೇಕಡಾ ಹೆಚ್ಚು ನೀರನ್ನು ಒಯ್ಯಬೇಕು. ಇದು ಸಾಧ್ಯವಾಗದ್ದರಿಂದ ಫ್ರೀಜೋರ್ಡನ್ನು ಕೊಡಿ ಕಾಲುವೆಯಲ್ಲಿ ನೀರು ಹರಿಯುತ್ತದೆ. ಆದರೂ ತುದಿಯ ಕ್ಷೇತ್ರಗಳಿಗೆ ನೀರು ಮುಟ್ಟಿಸುವುದು. ಕಷ್ಟದ ಕೆಲಸ. ಆದರೂ ಪಾಳಿಯ ಮೇರೆಗೆ ಪ್ರಯತ್ನ ಮಾಡಲಾಗುತ್ತಿದೆ. 40:40:20 ನಮೂನೆಯನ್ನು ರೈತರು ಪಾಲಿಸದಿರುವುದೇ ಎಲ್ಲ ಕ್ಷೇತ್ರಕ್ಕೂ ನೀರು ಪೂರೈಸಲಾಗದ್ದಕ್ಕೆ ಕಾರಣ.

ಈ ಸಾಲಿನಲ್ಲಿ ಮಲಪ್ರಭಾ ಜಲಾಶಯದಲ್ಲಿ ಶೇಖರಣೆಯಾದ ನೀರಿನ ಪ್ರಮಾಣ ಖರಿಫಗೆ ಮಾತ್ರ ಪ್ರಕಟಿಸಲಾಗಿತ್ತು. ಆದರೂ ನವೆಂಬರ್ ತಿಂಗಳಲ್ಲಿ ಆದ ಮಳೆಯ ಕಾರಣ 22.1.96 ದಿನಾಂಕದವರೆಗೆ ದ್ವಿಋತುಗಳಿಗೆ ನೀರನ್ನು ಮುಂದುವರಿಸಲಾಯಿತು. ಆದರೆ ರೈತರು ಶೇಕಡಾ 100 ಕ್ಷೇತ್ರವನ್ನು ಹಿಂಗಾರು ಋತುವಿನಲ್ಲೂ ಬಿತ್ತಿತಿದ ಕಾರಣ ಫೆಬ್ರವರಿ 15ರ ವರೆಗೆ ದ್ವಿಋತುಗಳಿಗೆ ನೀರು ಮುಟ್ಟಿಸಲಾಗಿಲ್ಲ.

ಈ ಸಾಲಿನಲ್ಲಿ ಮಾರ್ಚ್ 1996ರ ವರೆಗೆ ಈ ವರ್ಷದ ಅನುದಾನದಲ್ಲಿ ಕೆಲವು ಭಾಗಗಳಲ್ಲಿ ಲೈನಿಂಗ್ ಕೆಲಸ ಬ್ಯಾಂಕ್‌ಗಳನ್ನು ಗಟ್ಟಿಗೊಳಿಸುವುದು ಮತ್ತು ಇತರೆ ಅತ್ಯವಶ್ಯ ದುರಸ್ತಿ ಕೆಲಸಗಳನ್ನು 10.68 ಲಕ್ಷ ರೂ.ಗಳ ವಚ್ಚದಲ್ಲಿ ಕೈಗೆತ್ತಿ ಕೊಳ್ಳಲಾಗಿದೆ.

1996-97 ಖರೀದಿ ಪ್ರಾರಂಭವಾಗುವುದರೊಳಗೆ 35 ಕ್ಯೂಸೆಕ್ಸ್‌ವರೆಗೆ ಬರುವ ಕಾಲುವೆ ದುರಸ್ತಿ ಮುಂದಿನ ಸಿ.ಡಿ.ಗಳ ದುರಸ್ತಿಯನ್ನು ಹಣದ ಲಬ್ಯತೆಯನ್ನವಲಂಬಿಸಿ ತೆಗೆದುಕೊಳ್ಳಲಾಗುವುದು.

ಮೇಲಿನಂತೆ ಕಾಲುವೆ ಸುಧಾರಿಸಿದರೂ ರೈತರು ನಿಗಧಿತ ಬೆಳೆ ನಮೂನೆ ಅನುಸರಿಸದಿದ್ದರೆ ತುದಿಯ ಗ್ರಾಮಗಳಿಗೆ ನೀರು ಪೂರೈಸುವುದು ಕಷ್ಟ ಸಾಧ್ಯವಾಗುತ್ತದೆ.